**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/-ಗಳವರೆಗಿನ ಸಾಲ ಮನ್ನಾ ಮಾಡುವ ಬಗ್ಗೆ ಹೊರಡಿಸಲಾದ ಆದೇಶದ ಷರತ್ತುಗಳಲ್ಲಿನ ಅಂಶಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೊ 2017, ದಿನಾಂಕ: 13.12.2017.
2. ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೊ 2017 (ಭಾ), ದಿನಾಂಕ: 29.01.2018
3. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಕೈಮಗ್ಗ/ಅಧೀ/ ಸಾಲ ಮನ್ನಾ /2017-18, ದಿನಾಂಕ: 17.01.2018.

- - -

**ಪ್ರಸ್ತಾವನೆ:-**

ಉಲ್ಲೇಖ-1ರ ಆದೇಶದಂತೆ, ಕರ್ನಾಟಕ ರಾಜ್ಯದಲ್ಲಿ ಕಳೆದ 03 ವರ್ಷಗಳಿಂದ ತಲೆದೋರಿರುವ ಭೀಕರ ಬರಗಾಲದ ಹಿನ್ನೆಲೆಯಲ್ಲಿ, ರಾಜ್ಯದ ಬಹುತೇಕ ತಾಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಬರದ ಹಿನ್ನೆಲೆಯಲ್ಲಿ, ರೈತರು ಸಂಕಷ್ಟದಲ್ಲಿರುವುದನ್ನು ಮನಗಂಡು ರೈತರು ಪಡೆದ ಕೃಷಿ ಸಾಲವನ್ನು ಸರ್ಕಾರವು ಮನ್ನಾ ಮಾಡಲು ಕ್ರಮವಹಿಸಿದ ರೀತಿಯಲ್ಲೇ ರಾಜ್ಯದ ನೇಕಾರರು ಸಹ ಬರದ ಹಿನ್ನೆಲೆಯಲ್ಲಿ ಸಂಕಷ್ಟವನ್ನು ಅನುಭವಿಸುತ್ತಿರುವುದರಿಂದ, ನೇಕಾರರು ವಿವಿಧ ಸಹಕಾರ ಬ್ಯಾಂಕುಗಳಿಂದ / ಸಂಘಗಳಿಂದ ಪಡೆದ ರೂ. 50,000/-ಗಳ ಸಾಲವನ್ನು ಮನ್ನಾ ಮಾಡಲಾಗಿದೆ.

ಉಲ್ಲೇಖ-2ರ ಸರ್ಕಾರಿ ಆದೇಶದಲ್ಲಿ, ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/-ಗಳವರೆಗಿನ (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಸಾಲ (ಅಸಲು ಮತ್ತು ಬಡ್ಡಿ ಸೇರಿ) ಮನ್ನಾ ಮಾಡುವ ಬಗ್ಗೆ ಹೊರಡಿಸಲಾದ ಆದೇಶದ ಅನುಬಂಧದ ಕೆಲವು ಅಂಶಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುತ್ತದೆ.

ಉಲ್ಲೇಖ-3ರಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಇವರು, ಪ್ರಸ್ತಾವನೆ ಸಲ್ಲಿಸುತ್ತಾ, ಉಲ್ಲೇಖ-1ರ ಸರ್ಕಾರಿ ಆದೇಶದಲ್ಲಿ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘ ಎಂದು ಮಾತ್ರ ಇದ್ದು ಕೆಲವು ಜಿಲ್ಲೆಗಳಲ್ಲಿ

....2

**ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು, ಇತರೆ ಸಹಕಾರಿ ಬ್ಯಾಂಕ್‌ಗಳು, ಸೌಹಾರ್ದ ಸಹಕಾರಿ / ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘಗಳು ಮತ್ತು ವಿವಿಧೊದ್ದೇಶ ಸಹಕಾರಿ ಸಂಘಗಳು** ಸಹ ನೇಕಾರರಿಗಾಗಿ ಸಾಲ ನೀಡಿರುತ್ತಾರೆ. ಈ ಸಂಬಂಧ ಸಹಕಾರ ಸಂಘಗಳ ನಿಬಂಧಕರು, ಸಹಕಾರಿ ಇಲಾಖೆ ರವರನ್ನು ಸಂಪರ್ಕಿಸಿ ಈ ಎಲ್ಲಾ ಸಂಸ್ಥೆಗಳ ಪಸ್ತಾವನೆಯನ್ನು ಸಾಲ ಮನ್ನಕ್ಕಾಗಿ ಪರಿಗಣಿಸಬಹುದೇ ಎಂಬ ಬಗ್ಗೆ ಸಲಹೆ ಪಡೆಯಲಾಗಿ, ಸಹಕಾರ ಇಲಾಖೆಯ ಅಧಿಕಾರಿಗಳು ಈ ಎಲ್ಲಾ ಸಂಸ್ಥೆಗಳ ಪ್ರಕರಣಗಳನ್ನು ಸಾಲ ಮನ್ನಕ್ಕಾಗಿ ಸೇರಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಗಳ ಪ್ರಸ್ತಾವನೆಗಳನ್ನು ಸಹ ಸಾಲ ಮನ್ನಾ ಯೋಜನೆಯಡಿ ಪರಿಗಣಿಸಲು ಕೋರಿರುತ್ತಾರೆ.

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ನೇಕಾರರ ಅನುಕೂಲಕ್ಕಾಗಿ ಉಲ್ಲೇಖ-1ರ ಆದೇಶದಲ್ಲಿರುವ ಷರತ್ತುಗಳನ್ನು ಭಾಗಶ: ಮಾರ್ಪಡಿನೊಂದಿಗೆ ಮುಂದುವರೆಸುತ್ತಾ, ಈಗಾಗಲೇ ಅನುಮೋದನೆಯಾಗಿರುವ ರೂ. 53.64 ಕೋಟಿಗಳ ಮಿತಿಯೊಳಗೆ ಮತ್ತು ಯಾವುದೇ ಹೆಚ್ಚುವರಿ ಕೋರಿಕೆಯನ್ನು ಪರಿಗಣಿಸುವುದಿಲ್ಲವೆಂಬ ಷರತ್ತಿಗೊಳಪಟ್ಟು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017, ಬೆಂಗಳೂರು, ದಿನಾಂಕ: 20.02.2018**

ರಾಜ್ಯದ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘ, ವಿವಿಧೋದ್ದೇಶ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು, ಇತರೆ ಸಹಕಾರಿ ಬ್ಯಾಂಕ್‌ಗಳು, ಸೌಹಾರ್ದ ಸಹಕಾರಿ / ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/-ಗಳವರೆಗಿನ (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಸಾಲ (ಅಸಲು ಮತ್ತು ಬಡ್ಡಿ ಸೇರಿ) ಮನ್ನಾ ಮಾಡುವ ಬಗ್ಗೆ ಹೊರಡಿಸಲಾದ ದಿನಾಂಕ: 13.12.2017ರ ಆದೇಶದಲ್ಲಿನ ಷರತ್ತಗಳಲ್ಲಿನ ಕೆಲವು ಅಂಶಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

**ಷರತ್ತುಗಳು:**

| ಕ್ರ. ಸಂ. | ಹಾಲಿ ಇರುವ ಷರತ್ತುಗಳು | ಪರಿಷ್ಕರಣೆ |
|---|---|---|
| 1 | ಈ ಸೌಲಭ್ಯವು ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017 ಕ್ಕೆ ಹೊಂದಿರುವ ಹೊರಬಾಕಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. | ಈ ಸೌಲಭ್ಯವು ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, **ವಿವಿಧೋದ್ದೇಶ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು, ಇತರೆ ಸಹಕಾರಿ ಬ್ಯಾಂಕ್‌ಗಳು, ಸೌಹಾರ್ದ ಸಹಕಾರಿ / ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘಗಳು** ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017 ಕ್ಕೆ ಹೊಂದಿರುವ ಹೊರಬಾಕಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. |

| | | |
|---|---|---|
| 2 | ದಿನಾಂಕ: 30.06.2017ರವರೆಗೆ ಅಲ್ಪಾವಧಿ ನೇಕಾರರ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊರ ಬಾಕಿ ಇರುವ ಸಾಲದ ಪೈಕಿ ರೂ. 50,000/- ವರೆಗಿನ ಸಾಲವನ್ನು (ಅಸಲು ಮತ್ತು ಬಡ್ಡಿ ಸೇರಿ) ಪೂರ್ಣ ಮನ್ನಾ ಮಾಡಲಾಗಿದೆ. | **ದಿನಾಂಕ: 26.07.2012 ರಿಂದ** 30.06.2017 ರವರೆಗಿನ ಅಲ್ಪಾವಧಿ/ **ಮಧ್ಯಮಾವಧಿ (ಅಂದರೆ ಗರಿಷ್ಠ 5 ವರ್ಷಗಳ ಮರುಪಾವತಿ ಅವಧಿಯ ಸಾಲ)** ನೇಕಾರರ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊರಬಾಕಿ ಇರುವ ಸಾಲದ ಪೈಕಿ ರೂ.50,000/- ವರೆಗಿನ ಸಾಲವನ್ನು (ಅಸಲು ಮತ್ತು ಬಡ್ಡಿ ಸೇರಿ) ಪೂರ್ಣ ಮನ್ನಾ ಮಾಡಲಾಗಿದೆ.<br>**ಹೊರಬಾಕಿ (Outstanding) ಎಂದರೆ ಬಾಕಿ ಇರುವ ಚಾಲ್ತಿ ಸಾಲದ ಮೊತ್ತ ಅಥವಾ ಸುಸ್ತಿ ಸಾಲದ ಮೊತ್ತವಾಗಿರುತ್ತದೆ.** |
| 10 | ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಈ ಯೋಜನೆಗೆ ಸಂಬಂಧಿಸಿದ ಕ್ಲೈಮ್ ಬಿಲ್ಲುಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಛೇರಿಗೆ ಸಲ್ಲಿಸುವುದು. | ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, **ವಿವಿಧೋದ್ದೇಶ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು, ಇತರೆ ಸಹಕಾರಿ ಬ್ಯಾಂಕ್‌ಗಳು, ಸೌಹಾರ್ದ ಸಹಕಾರಿ / ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘಗಳು** ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಈ ಯೋಜನೆಗೆ ಸಂಬಂಧಿಸಿದ ಕ್ಲೈಮ್ ಬಿಲ್ಲುಗಳನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಕಛೇರಿಗೆ ಸಲ್ಲಿಸುವುದು. |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 32 ವೆಚ್ಚ-1/2018, ದಿನಾಂಕ: 20.02.2018ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇವಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.
2. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ) / (ಇ&ಆರ್‌ಎಸ್‌ಎ) (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
4. ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಜವಳಿ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

...4

6. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, "ಶುಭೋದಯ ಕಾಂಪ್ಲೆಕ್ಸ್" ನಂ. 86, ರೈಲ್ವೆ ಪ್ಯಾರಲಲ್ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
7. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-1, ವಿಧಾನ ಸೌಧ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
10. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
11. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.

ಪ್ರತಿಯನ್ನು:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಇವರ ಆಪ್ತ ಕಾರ್ಯದರ್ಶಿಯವರಿಗೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರಿಗೆ
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಯವರಿಗೆ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಯವರಿಗೆ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/– ಗಳವರೆಗಿನ ಸಾಲ ಮನ್ನಾ ಮಾಡುವ ಬಗ್ಗೆ ಹೊರಡಿಸಲಾದ ಆದೇಶದ ಅನುಬಂಧದ ಅಂಶಗಳನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017, ದಿನಾಂಕ: 13.12.2017.
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಕೈಮಗ್ಗ/ಅಧೀ/ಸಾಲ ಮನ್ನಾ/2017–18/1077. ದಿ: 06.01.2018.

– – –

**ಪ್ರಸ್ತಾವನೆ:–**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ, ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/–ಗಳವರೆಗಿನ ಸಾಲ ಮನ್ನಾ ಮಾಡಲು ಆದೇಶಿಸಲಾಗಿದೆ. ಸದರಿ ಯೋಜನೆಯ ಕ್ಲೈಂ ಬಿಲ್ಲುಗಳನ್ನು ಕ್ಷೇತ್ರ ಮಟ್ಟದಲ್ಲಿ ತಪಾಸಣೆ ಮಾಡಲು ಪರಿಶೀಲಿಸಬೇಕಾದ ಅಂಶಗಳ ಬಗ್ಗೆ ಅನುಬಂಧದಲ್ಲಿ ವಿವರಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರದಲ್ಲಿ, ಸದರಿ ಆದೇಶದ ಅನುಬಂಧದಲ್ಲಿನ ಕೆಲವು ಅಂಶಗಳನ್ನು ಮಾರ್ಪಡಿಸಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಈ ಯೋಜನೆಯ ಅನುಷ್ಠಾನದಲ್ಲಿ ತೊಂದರೆಗಳು ಕಂಡುಬಂದಲ್ಲಿ, ಈ ಬಗ್ಗೆ ತಿದ್ದುಪಡಿ ಕ್ರಮ ಕೈಗೊಳ್ಳಲು ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017, ದಿನಾಂಕ: 13.12.2017ರ ಷರತ್ತು ಮತ್ತು ನಿಬಂಧನೆಗಳ ಕ್ರಮ ಸಂಖ್ಯೆ 13 ರಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಅಧಿಕಾರ ಹೊಂದಿರುತ್ತದೆ. ಅದರಂತೆ ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ನೇಕಾರರ ಅನುಕೂಲಕ್ಕಾಗಿ ಉಲ್ಲೇಖಿ (1)ರ ಆದೇಶದಲ್ಲಿನ ಅನುಬಂಧವನ್ನು ಭಾಗಶಃ ಮಾರ್ಪಡಿನೊಂದಿಗೆ ಮುಂದುವರೆಸುತ್ತಾ, ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 57 ಜಕೈಯೋ 2017 (ಭಾ), ಬೆಂಗಳೂರು, ದಿನಾಂಕ: 29.01.2018**

ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು, ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದು

ದಿನಾಂಕ: 30.06.2017ಕ್ಕೆ ಹೊಂದಿರುವ ಹೊರಬಾಕಿಯಲ್ಲಿ ರೂ. 50,000/-ಗಳವರೆಗಿನ ಸಾಲ ಮನ್ನಾ ಮಾಡುವ ಬಗ್ಗೆ ಹೊರಡಿಸಲಾದ ಆದೇಶದ ಅನುಬಂಧದ ಕೆಲವು ಅಂಶಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

## ಅನುಬಂಧ

| ಕ್ರ ಸಂ | ವಿವರ | ಹಾಲಿ ಇರುವ ಅಂಶಗಳು | ಪರಿಷ್ಕರಿಸಲಾದ ಅಂಶಗಳು |
|---|---|---|---|
| 1 | ಮಗ್ಗ ಪೂರ್ವ ಚಟುವಟಿಕೆ | 2. ಮಗ್ಗ ಪೂರ್ವ ಚಟುವಟಿಕೆ ನಿರ್ವಹಿಸುವ ಅವಶ್ಯಕ ಕಚ್ಚಾಮಾಲು ಇತರೆ ವಸ್ತುಗಳ ಖರೀದಿಗಳ ಬಗ್ಗೆ ಬಿಲ್ ಪರಿಶೀಲಿಸತಕ್ಕದ್ದು. | ಮಗ್ಗ ಪೂರ್ವ ಚಟುವಟಿಕೆ ನಿರ್ವಹಿಸಲು ಖರೀದಿಸಿದ ಅವಶ್ಯಕ ಕಚ್ಚಾಮಾಲು ಇತರೆ ವಸ್ತುಗಳ ಉಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |
| | | 3. ಮಗ್ಗ ಪೂರ್ವ ಚಟುವಟಿಕೆಗಳ ಸಾಮಾಗ್ರಿಗಳಿಗಾಗಿ ಸಾಲ ಪಡೆದಿದ್ದಲ್ಲಿ ಸಾಮಗ್ರಿಗಳ ಖರೀದಿ ಬಗ್ಗೆ ಬಿಲ್ ಪರಿಶೀಲಿಸತಕ್ಕದ್ದು. | ಮಗ್ಗ ಪೂರ್ವ ಚಟುವಟಿಕೆಗಳ ಸಾಮಾಗ್ರಿಗಳಿಗಾಗಿ ಸಾಲ ಪಡೆದಿದ್ದಲ್ಲಿ ಸಾಮಗ್ರಿಗಳ ಉಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |
| | | 4. ಮಗ್ಗ ಪೂರ್ವ ಚಟುವಟಿಕೆಗೆ ವಿದ್ಯುಚ್ಛಕ್ತಿ ಬಳಸುತ್ತಿದ್ದಲ್ಲಿ ವಿದ್ಯುತ್ ಸಂಪರ್ಕದ ಮೀಟರ್ ಪರಿಶೀಲಿಸಿ ಚಟುವಟಿಕೆ ನಿರ್ವಹಿಸಲು ವಿದ್ಯುತ್ ಬಳಸಿಕೊಳ್ಳುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು. ವಿದ್ಯುತ್ ಮೀಟರ್ ಸಂಖ್ಯೆ ದಾಖಲಿಸಿ ಕೊಳ್ಳತಕ್ಕದ್ದು. | ಮಗ್ಗ ಪೂರ್ವ ಚಟುವಟಿಕೆಗೆ ವಿದ್ಯುಚ್ಛಕ್ತಿ ಬಳಸುತ್ತಿದ್ದಲ್ಲಿ ವಿದ್ಯುತ್ ಸಂಪರ್ಕದ ಮೀಟರ್ ಪರಿಶೀಲಿಸಿ ಸಾಲ ಪಡೆದ ಅವಧಿಯಲ್ಲಿ ವಿದ್ಯುತ್ ಬಳಸಿಕೊಂಡಿರುವ ಬಗ್ಗೆ ಹಾಗೂ ಹಾಲಿ ಚಟುವಟಿಕೆ ನಿರ್ವಹಿಸಲು ವಿದ್ಯುತ್ ಬಳಸಿಕೊಳ್ಳುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು ಹಾಗೂ ವಿದ್ಯುತ್ ಮೀಟರ್ ಸಂಖ್ಯೆ ದಾಖಲಿಸಿಕೊಳ್ಳತಕ್ಕದ್ದು. |
| 2 | ಕೈಮಗ್ಗ ನೇಕಾರಿಕೆ ಚಟುವಟಿಕೆ | 4. ಕೈಮಗ್ಗ ಚಟುವಟಿಕೆ ನಿರ್ವಹಿಸಲು ಅವಶ್ಯಕ ವಸ್ತುಗಳ ಖರೀದಿಗಳ ಬಗ್ಗೆ ಬಿಲ್ ಪರಿಶೀಲಿಸತಕ್ಕದ್ದು. | ಕೈಮಗ್ಗ ಚಟುವಟಿಕೆ ನಿರ್ವಹಿಸಲು ಖರೀದಿಸಿದ ಅವಶ್ಯಕ ಕಚ್ಚಾಮಾಲು ಇತರೆ ವಸ್ತುಗಳ ಉಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |
| | | 5. ಕೈಮಗ್ಗ ಚಟುವಟಿಕೆಗಳ ಸಾಲ ಪಡೆದಿದ್ದಲ್ಲಿ ಮಗ್ಗ / ಸಾಮಗ್ರಿ ಖರೀದಿ ಬಗ್ಗೆ ಬಿಲ್ ಪರಿಶೀಲಿಸತಕ್ಕದ್ದು. | ಕೈಮಗ್ಗ ಚಟುವಟಿಕೆಗಳ ಸಾಲ ಪಡೆದಿದ್ದಲ್ಲಿ ಮಗ್ಗ / ಸಾಮಗ್ರಿಗಳ ಉಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |
| | | 6. ಪಕ್ಕಾಮಾಲು ಮಾರಾಟದ ಬಗ್ಗೆ ವಿವರ ಪರಿಶೀಲಿಸತಕ್ಕದ್ದು. | ಪಕ್ಕಾಮಾಲು ಮಾರಾಟದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |
| 3 | ವಿದ್ಯುತ್ ಮಗ್ಗ ನೇಕಾರಿಕೆ ಚಟುವಟಿಕೆ | 3. ವಿದ್ಯುತ್ ಸಂಪರ್ಕದ ಮೀಟರ್ ಪರಿಶೀಲಿಸಿ ನೇಕಾರಿಕೆಗಾಗಿ ವಿದ್ಯುತ್ ಬಳಸಿಕೊಳ್ಳುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳತಕ್ಕದ್ದು ವಿದ್ಯುತ್ ಮೀಟರ್ ಸಂಖ್ಯೆ ದಾಖಲಿಸಿಕೊಳ್ಳ ತಕ್ಕದ್ದು. | ವಿದ್ಯುತ್ ಸಂಪರ್ಕದ ಮೀಟರ್ ಪರಿಶೀಲಿಸಿ ನೇಕಾರಿಕೆಗಾಗಿ ಸಾಲ ಪಡೆದ ಅವಧಿಯಲ್ಲಿ ವಿದ್ಯುತ್ ಬಳಸಿಕೊಂಡಿರುವ ಬಗ್ಗೆ ಹಾಗೂ ಹಾಲಿ ವಿದ್ಯುತ್ ಬಳಸಿಕೊಳ್ಳುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು ಹಾಗೂ ವಿದ್ಯುತ್ ಮೀಟರ್ ಸಂಖ್ಯೆ ದಾಖಲಿಸಿಕೊಳ್ಳತಕ್ಕದ್ದು. |

| | | | |
|---|---|---|---|
| | | 5. ವಿದ್ಯುತ್ ಮಗ್ಗ ಚಟುವಟಿಕೆ ನಿರ್ವಹಿಸಲು ಅವಶ್ಯಕ ಇತರೆ ವಸ್ತುಗಳ ಖರೀದಿಗಳ ಬಗ್ಗೆ ಬಿಲ್ ಪರಿಶೀಲಿಸತಕ್ಕದ್ದು. | ವಿದ್ಯುತ್ ಮಗ್ಗ ಚಟುವಟಿಕೆ ನಿರ್ವಹಿಸಲು ಖರೀದಿಸಿದ ಅವಶ್ಯಕ ಕಚ್ಚಾಮಾಲು ಇತರೆ ವಸ್ತುಗಳ ಉಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |
| | | 6. ವಿದ್ಯುತ್ ಮಗ್ಗ ಚಟುವಟಿಕೆಗಳ ಸಾಲ ಪಡೆದಿದ್ದಲ್ಲಿ ಮಗ್ಗ / ಸಾಮಗ್ರಿ ಖರೀದಿ ಬಗ್ಗೆ ಬಿಲ್ ಪರಿಶೀಲಿಸತಕ್ಕದ್ದು. | ವಿದ್ಯುತ್ ಮಗ್ಗ ಚಟುವಟಿಕೆಗಳ ಸಾಲ ಪಡೆದಿದ್ದಲ್ಲಿ ಮಗ್ಗ / ಸಾಮಗ್ರಿ ಉಪಯೋಗದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |
| | | 7. ಪಕ್ಕಾಮಾಲು ಮಾರಾಟದ ಬಗ್ಗೆ ವಿವರ ಪರಿಶೀಲಿಸತಕ್ಕದ್ದು. | ಪಕ್ಕಾಮಾಲು ಮಾರಾಟದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಖಾತ್ರಿಪಡಿಸಿಕೊಳ್ಳತಕ್ಕದ್ದು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇವಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಕೂಡಲೇ ಪ್ರಕಟಿಸಿ, ಆದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.
2. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ) / (ಇ&ಆರ್ಎಸ್ಎ) (ಎ&ಇ), ಕರ್ನಾಟಕ ರಾಜ್ಯ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
4. ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಜವಳಿ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, "ಶುಭೋದಯ ಕಾಂಪ್ಲೆಕ್ಸ್" ನಂ. 86, ರೈಲ್ವೆ ಪ್ಯಾರಲಲ್ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
7. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-1, ವಿಧಾನ ಸೌಧ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿ., ಬೆಂಗಳೂರು.
10. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
11. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.

**ಪ್ರತಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಯವರಿಗೆ ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರಿಗೆ,
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಯವರಿಗೆ, ಆರ್ಥಿಕ ಇಲಾಖೆ,
4. ಸರ್ಕಾರದ ಪ್ರಧಾನ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಯವರಿಗೆ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.